# ಎಂತಹ ಪಾತ್ರವನ್ನಾದರೂ ಮಾಡುವ ಧೈರ್ಯ ಬಂದಿದೆ



**ಸಾರಾ ಅಣ್ಣಯ್ಯ**
**ಕಲರ್ಸ್ ಕನ್ನಡದ 'ಕನ್ನಡತಿ'ಯ ವರೂಧಿನಿ**

◆ **ನೀವು ತೆರೆಯ ತಾರೆಯಾಗಿದ್ದು ಹೇಗೆ?**

ಮಾಡೆಲಿಂಗ್ ಮಾಡ್ತಾ ಇದ್ದೆ. ಅನೇಕ ಡಿಸೈನ್‌ಗಳಿಗೆ ರ್‍ಯಾಂಪ್ ಶೋಗಳನ್ನು ನೀಡಿದ್ದೇನೆ. ಹೀಗಿದ್ದಾಗ ತಮಿಳಿನ ಸಿನಿಮಾಕ್ಕೆ ಅವಕಾಶ ಅದಾಗಿಯೇ ಬಂತು. ಹೊಸದೊಂದು ಅವಕಾಶ ಸಿಕ್ಕಿದೆ ಅದನ್ನು ನೋಡೋಣ ಎನ್ನುವ ಪರೀಕ್ಷಾರ್ಥ ಮನೋಭಾವದಲ್ಲಿಯೇ ಪ್ರವೇಶ ಮಾಡಿದೆ. ಅದರ ಜೊತೆ ತಮಿಳಿನ ಧಾರಾವಾಹಿಯಲ್ಲಿಯೂ ನನಗೊಂದು ಪಾತ್ರ ಸಿಕ್ಕಿತು. ಹಾಗಾಗಿ ಹಲವು ದಿನ ಚೆನ್ನೈಯಲ್ಲಿ ಇದ್ದೆ. ಆ ಧಾರಾವಾಹಿ ಮುಗೀತು ಎನ್ನುವ ಹೊತ್ತಿಗೆ 'ಕನ್ನಡತಿ'ಯಲ್ಲಿ ಅವಕಾಶ ಸಿಕ್ಕಿದೆ. ಕನ್ನಡದಲ್ಲಿ ಇದು ಮೊದಲ ಧಾರಾವಾಹಿ. ತಮಿಳಿನಲ್ಲಿ ವೆಬ್ ಸಿರೀಸ್ ಕೂಡ ಮಾಡಿದ್ದೇನೆ. ಇದೆಲ್ಲ ಆಕಸ್ಮಿಕ ಅಷ್ಟೆ.

◆ **ಕನ್ನಡದ ಕಥೆಗೆ ಬಂದ ನಂತರ ನಿಮ್ಮನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಅನ್ನಿಸಿದೆಯಾ?**

ಜನ ಗುರುತಿಸುತ್ತಾರೆ. ಈಗ ನಾನು ನಿರ್ವಹಿಸುತ್ತಿರುವ ಪಾತ್ರ ಒಂದು ರೀತಿಯಲ್ಲಿ ಸೈಕೊ ಗುಣವನ್ನು ಪ್ರತಿಬಿಂಬಿಸುವಂತಿದೆ. ನನ್ನನ್ನು ನೋಡಿದಾಗ 'ಸೈಕೊ ವರೂ' ಎಂದು ಕರೆಯುತ್ತಾರೆ. ಹಾಗೆ ಹೇಳಿದಾಗ ಕೆಟ್ಟದಾಗಿ ಕೇಳಿದರೂ, ಪಾತ್ರವಾಗಿ ಜನರನ್ನು ತಲುಪಿದ್ದೇನೆ ಅನ್ನಿಸುತ್ತದೆ. ನನ್ನ ಅಭಿನಯವನ್ನು ಗುರುತಿಸುವುದು ಸಮಾಧಾನವನ್ನು ನೀಡುತ್ತದೆ. ವೀಕ್ಷಕರ ಪ್ರತಿಕ್ರಿಯೆಯಿಂದ ಖುಷಿ ಆಗುತ್ತದೆ. ಅನ್ಯ ಭಾಷೆಗಳಲ್ಲಿ ಎಂತಹ ಪಾತ್ರವನ್ನೇ ಪ್ರತಿನಿಧಿಸಿದರೂ ನಮ್ಮ ಭಾಷೆಯಲ್ಲಿ ಪುಟ್ಟ ಪಾತ್ರವಾದರೂ ಅದರ ಮನ್ನಣೆಯಿಂದ ಸಿಗುವ ಖುಷಿಯೇ ಬೇರೆ. ಈಗ ನನ್ನ ಮಾತೃಭಾಷೆಯಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಕನ್ನಡಿಗರ ಮನಸ್ಸಿನಲ್ಲಿಯೂ ನನಗೊಂದಿಷ್ಟು ಜಾಗ ಸಿಕ್ಕಿದೆ ಎಂದು ಅನ್ನಿಸಿದೆ.

◆ **ಕಲಾ ಜಗತ್ತು ನಿಮಗೆ ಪರಿಚಯ ಆಗಿದ್ದು ಹೇಗೆ?**

ಕಾಲದ ಪ್ರವಾಹದಲ್ಲಿ ಸಾಗಿ ಬಂದವಳು ನಾನು. ಕಲಾ ಜಗತ್ತಿಗೆ ಪರಿಚಯ ಆಗುತ್ತೇನೆ ಎಂದು ಎಂದೂ ಅಂದುಕೊಂಡಿರಲಿಲ್ಲ. ಕಾಲ ಕೈ ಹಿಡಿದು ನಡೆಸಿದಂತೆ ಸಾಗಿ ಬಂದಿದ್ದೇನೆ. ಒಳ್ಳೆಯ ಅವಕಾಶಗಳು ಒಂದಾದ ಮೇಲೆ ಒಂದು ಬರುತ್ತಿವೆ. ಅದನ್ನು ನಾನು ಚೆನ್ನಾಗಿ ಉಪಯೋಗಿಸುತ್ತಿದ್ದೇನೆ ಅಷ್ಟೇ. ಮಾಡೆಲಿಂಗ್ ಮೋಹ ಮೊದಲಿನಿಂದಲೂ ಹೇಗೋ ಮನಸ್ಸಿನಲ್ಲಿ ಮನೆ ಮಾಡಿತ್ತು. ಅದರತ್ತ ಆಕರ್ಷಿತಳಾದ ಕಾರಣ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದೆ. ಮಾಡೆಲಿಂಗ್‌ನಲ್ಲಿಯೇ ಸಂಪೂರ್ಣ ನನ್ನನ್ನು ತೊಡಗಿಸಿಕೊಂಡೆ. ಸಿನಿಮಾ– ಟೀವಿ ನನಗೆ ಹೊಸತು. ಅವುಗಳ ಪರಿಚಯವೇ ಇರಲಿಲ್ಲ. ನಮ್ಮ ಕುಟುಂಬದಲ್ಲಿಯೂ ಯಾರೂ ಈ ಕ್ಷೇತ್ರದಲ್ಲಿ ಇಲ್ಲ. ನನಗೆ ಫೇಸ್‌ಬುಕ್ ಹಾಗೂ ಪರಿಚಯಸ್ಥರ ಮೂಲಕ ಮಾಡೆಲಿಂಗ್ ಅವಕಾಶ ಸಿಕ್ಕಿತ್ತು. ಅದರ ಮೂಲಕವೇ ಸಿನಿಮಾದ ಕಿರುದಾರಿ ಕಾಣಿಸಿಕೊಂಡಿತು. ನಾನು ಅಂತರ್ಮುಖಿ; ಸ್ನೇಹಿತರು ತುಂಬ ಕಡಿಮೆ.

◆ **ಸೆಲೆಬ್ರಿಟಿ ಆದ ನಂತರ ಸಾಮಾಜಿಕವಾಗಿ ಕಂಡ ಬದಲಾವಣೆ...**

ನನಗೆ ಸೆಲೆಬ್ರಿಟಿ ಎನ್ನುವ ಭ್ರಮೆಯೇ ಇಲ್ಲ. ನಾನು ಸಾಮಾನ್ಯ ಯುವತಿ ಮಾತ್ರ. ನನ್ನ ಕೆಲಸ ನಾನು ಮಾಡುತ್ತಿದ್ದೇನೆ ಅಷ್ಟೇ. ಎಲ್ಲರೂ ಅವರವರ ಕೆಲಸ ಮಾಡುವ ಹಾಗೆಯೇ.

ಕೊರೊನಾ ಕಾರಣಕ್ಕೆ ಹೊರಗಡೆ ಹೋಗಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಜನರ ಪ್ರತಿಸ್ಪಂದನವನ್ನು ಇನ್ನೂ ಅರಿಯಲು ಸಾಧ್ಯವಾಗಿಲ್ಲ. ಯಾವುದೋ ಕಾರಣಕ್ಕೆ ಮಾರುಕಟ್ಟೆಗೆ ಹೋದಾಗ ಗುರುತಿಸಿ ಮಾತನಾಡಿಸುವವರು ಇದ್ದಾರೆ. 'ಕನ್ನಡತಿ' ಶುರುವಾದ ಮೇಲೆ ಹೆಚ್ಚು ಸುತ್ತಾಡಿಲ್ಲ. ಸೆಲೆಬ್ರಿಟಿ ಎನ್ನುವುದು ಹೇಗೆ ಕೆಲಸ ಮಾಡುತ್ತದೆ ಎನ್ನುವುದು ನನಗೆ ಗೊತ್ತಿಲ್ಲ.

◆ **ಮುಂದಿನ ಹೆಜ್ಜೆಗಳು ಹೇಗಿರುತ್ತವೆ ಎಂದು ಅಂದಾಜಿಸಿದ್ದೀರಿ?**

ಸದ್ಯ 'ಕನ್ನಡತಿ' ಮೇಲೆ ಸಂಪೂರ್ಣ ಗಮನವನ್ನು ಕೇಂದ್ರೀಕರಿಸಿದ್ದೇನೆ. ಕೊವಿಡ್ ಕರಿನೆರಳು ಇಂಡಸ್ಟ್ರಿ ಮೇಲೂ ಬಿದ್ದಿರುವುದರಿಂದ ದೊಡ್ಡ ಪ್ರಮಾಣದ ಹೊಸ ಪ್ರಾಜೆಕ್ಟ್ ಬರ್ತಾ ಇಲ್ಲ. ಕೆಲವೊಂದು ಸಿನಿಮಾ ಅವಕಾಶಗಳು ಇವೆ. ಮೊದಲಿನಿಂದಲೂ ಸಿನಿಮಾ ಬಗ್ಗೆ ಅಷ್ಟೊಂದು ಒಲವು ಇರಲಿಲ್ಲ. ಆ ಮಟ್ಟಿನ ಆತ್ಮವಿಶ್ವಾಸವೂ ಆರಂಭದಲ್ಲಿ ಇರಲಿಲ್ಲ. ಎಲ್ಲೋ ಸುಪ್ತವಾಗಿ ಭಯ ಕಾಡುತ್ತಿತ್ತು. ಈಗ ಅಂತಹ ಅಳುಕು ಇಲ್ಲ. ಎಂತಹ ಪಾತ್ರವನ್ನಾದರೂ ಮಾಡಬಹುದು ಎನ್ನುವ ಧೈರ್ಯ ಬಂದಿದೆ. ಅದಕ್ಕೆಲ್ಲ ಕನ್ನಡಿತಿಯಿಂದ ಬಂದ ಸಕಾರಾತ್ಮಕ ಪ್ರತ್ರಿಕ್ರಿಯೆ ಕಾರಣ. ನಟನೆ ಇಷ್ಟು ಪ್ರಭಾವಿ ಎನ್ನುವುದೂ ಮೊದಲು ಗೊತ್ತಿರಲಿಲ್ಲ. ನಟನೆಗೂ– ಮಾಡೆಲಿಂಗ್‌ಗೂ ತುಂಬಾ ಅಂತರವಿದೆ. ಮೊದಲು ಬಣ್ಣ ಹಚ್ಚಿದಾಗ ಭಯ ಸಹಜವಾಗಿತ್ತು. ಕ್ಯಾಮೆರಾ ಎದುರು ನಿಲ್ಲಲು ಸಿಕ್ಕಾಪಟ್ಟೆ ಹೆದರುತ್ತಿದ್ದೆ.

◆ **ಹವ್ಯಾಸಗಳ ಬಗ್ಗೆ ಹೇಳುವುದಾದರೆ..**

ಪ್ರವಾಸವನ್ನು ಅತ್ಯಂತ ಹೆಚ್ಚು ಪ್ರೀತಿಸುತ್ತೇನೆ. ಸಮಯ ಸಿಕ್ಕರೆ ಎಲ್ಲಿಗಾದರೂ ಹಾರುವ ಬಯಕೆ ಇದೆ. ಇಷ್ಟಪಟ್ಟು ಸಿನಿಮಾ ನೋಡುತ್ತೇನೆ. ಅಡುಗೆ ಮಾಡುವ ಆಸಕ್ತಿ ನನಗೆ ಮೊದಲಿನಿಂದಲೂ ಬಂದಿಲ್ಲ. ಡಯಟ್ ಉಸಾಬರಿಗೆ ಹೋಗುವುದಿಲ್ಲ ಇಷ್ಟವಾಗಿದ್ದನ್ನು ತಿಂದು ಚೆನ್ನಾಗಿದ್ದೇನೆ. ವರ್ಕೌಟ್ ಬಗ್ಗೆನೂ ತಲೆಕೆಡಿಸಿಕೊಳ್ಳುವುದಿಲ್ಲ.

■ **ರಾಘವೇಂದ್ರ ಕೆ.**